ಪಠಾಣರು ಹಾಗೆಯೇ. ಹೆಚ್ಚು ಹೊತ್ತು ಸುಮ್ಮನಿರಲಾರರು. ಏನಾದರೂ ಮಾತಾಡಬೇಕು. ನಾನೂ ಮಂದಹಾಸ ಬೀರಿದೆ. ಆತನಿಗೆ ಮಾತು ಮುಂದುವರೆಸಲು ಪರವಾನಿಗೆ ಸಿಕ್ಕಿತೆಂದೇ ಭಾವಿಸಿದ. "ಇಲ್ಲಿ ಈ ಡ್ರೈವರ್ ಕೆಲಸಕ್ಕೆ ಸೇರಲು ಸಂದರ್ಶನಕ್ಕೆ ಕರೆದಿದ್ದರು. ಕೇವಲ ಐದೇ ನಿಮಿಷ. ಹಸನ್ ಅಲ್ವಾ ನಿನ್ನ ಹೆಸರು? ಅಂತ ಮೊದಲ ಪ್ರಶ್ನೆ. ಎಷ್ಟು ವರ್ಷ ಕಾರು ಚಲಾಯಿಸಿದ್ದೀ? ಎರಡನೇ ಪ್ರಶ್ನೆ. ಎಷ್ಟು ಆಕ್ಸಿಡೆಂಟ್ ಮಾಡಿದ್ದೀ? ಮೂರನೇ ಪ್ರಶ್ನೆ. ಆಕ್ಸಿಡೆಂಟ್ ಏಳೆಂಟು ಬಾರಿ ಆಗಿತ್ತು. ಮೂರು ಎಂದು ಉತ್ತರಕೊಟ್ಟಿದ್ದೆ. ನನ್ನ ಉತ್ತರಗಳನ್ನು ಗಮನಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆಮೇಲೆ, "ಅಗತ್ಯಕ್ಕೆ ಬೇಕಾದಷ್ಟು ಇಂಗ್ಲಿಷ್ ಮಾತನಾಡಲು ಕಲಿ" ಎಂದಷ್ಟೇ ಹೇಳಿದ್ದು. ಅಷ್ಟು ಹೇಳಿ ಈ ಕೆಲಸಕೊಟ್ಟರು. ಈ ಮೊದಲು ಪಾಕಿಸ್ತಾನದಲ್ಲಿ ಮಿಲಿಟರಿಗೆ ಸೇರಲು ಸಂದರ್ಶನವಿತ್ತು. ಅದಾದರೆ ಇಂಟರ್‌ವ್ಯೂ... ಅರ್ಧಗಂಟೆ ನನ್ನನ್ನು ಮೇಲೆ ಕೆಳಗೆ ಮಾಡಿದ್ರು" ಎಂದ.

"ಯಾಕೆ, ಏನು ಕೇಳಿದ್ರು?" ಕುತೂಹಲದಿಂದ ಕೇಳಿದೆ ನಾನು.

"ಏನೇನೋ ಕೇಳಿದ್ರು. ಮೊದಲು ಕೇಳಿದ್ದು ಈಗಿನ ರಕ್ಷಣಾ ಮಂತ್ರಿ ಯಾರು ಅಂತ. ಉತ್ತರ ಸರಿಯಾಗಿ ಹೇಳಿದ್ದೆ. ಆಮೇಲೆ ಪಾಕಿಸ್ತಾನದ ಇತಿಹಾಸ, ನೆರೆಹೊರೆ ದೇಶಗಳು, ಬಾಂಗ್ಲಾ ಸಮರ, ಮುಖ್ಯಬೆಳೆ, ಮುಖ್ಯ ನದಿಗಳು ಇತ್ಯಾದಿ ಇತ್ಯಾದಿ. ಉತ್ತರ ಅವರಿಗೂ ಸರಿಯಾಗಿ ಗೊತ್ತಿತ್ತೋ ಇಲ್ಲವೋ! ನಮ್ಮಣ್ಣ ಆಗಲೇ ಮಿಲಿಟ್ರಿಯಲ್ಲಿದ್ದ. ಹಾಗೆ ನನ್ನನ್ನೂ ಮಿಲಿಟ್ರಿಗೆ ಸೇರಿಸಿಕೊಳ್ಳಲು ಇಷ್ಟವಿರಲಿಲ್ಲ ಅವರಿಗೆ. ಒಂದು ಕುಟುಂಬದ ಒಬ್ಬರಿಗೆ ಮಾತ್ರ ಮಿಲಿಟರಿಯಲ್ಲಿ ನೌಕರಿ ಎನ್ನುವ ಅಲಿಖಿತ ನಿಯಮ ಇದೆ ಅಂತಾರೆ. ನನ್ನನ್ನು ನಪಾಸು ಮಾಡಬೇಕಿತ್ತು ಅವರಿಗೆ... ಕೊನೆಕೊನೆಗೆ ನಾನೂ ಬಾಯಿಗೆ ಬಂದ ಉತ್ತರ ಕೊಟ್ಟು ಬಂದಿದ್ದೆ" ಎಂದು ಹೇಳಿ ಗಹಗಹಿಸಿ ನಕ್ಕ ಆತ.

ಸುಮ್ಮನಿದ್ದೆ ನಾನು.

"ನೀನು ಸೇನೆಗೆ ಸೇರುವುದಕ್ಕೆ ಮನಸ್ಸು ಮಾಡಲಿಲ್ಲವಾ?" ಎಂದ.

ಇಲ್ಲ ಅಂದೆ ನಾನು.

"ನಿನ್ನ ಅಪ್ಪ, ಚಿಕ್ಕಪ್ಪ, ದೊಡ್ಡಪ್ಪ, ಅಣ್ಣ, ಮಾವ, ಭಾವ... ಹೀಗೆ ಯಾರಾದ್ರೂ ಸಂಬಂಧಿಕರು ಸೇನೆಯಲ್ಲಿದ್ದಾರಾ?" ಪುನಃ ಕೇಳಿದ.

"ಇಲ್ಲ" ಅಂದೆ ನಾನು.

"ನಿಮ್ಮೂರಿನವರು, ಪರಿಚಯದವರು ಯಾರಾದ್ರೂ?" ಮತ್ತೆ ಕೇಳಿದ ಹಸನ್.

"ನಮ್ಮಲ್ಲಿ ಯಾರೂ ಇಲ್ಲ. ಹತ್ತಿರದ ಎರಡು ಮೂರು ಹಳ್ಳಿಗಳಲ್ಲಿ ಕೂಡ ಯಾರೂ ಇಲ್ಲ. ನಮ್ಮ ರಾಜ್ಯದಲ್ಲಿ ಕೊಡಗು ಎಂಬ ಜಿಲ್ಲೆಯಿದೆ. ಅಲ್ಲಿಯ ಯುವಕರು ಮಿಲಿಟರಿ ಸೇರುವುದು ಜಾಸ್ತಿ. ಉಳಿದ ಜಿಲ್ಲೆಗಳಲ್ಲಿ ಮಿಲಿಟ್ರಿ ಸೇರುವವರ ಸಂಖ್ಯೆ ತೀರ ಕಡಿಮೆ" ಎಂದೆ ನಾನು.

"ನಮ್ಮಲ್ಲಿ ಸೇನೆಗೆ ಸೇರಲು ಎಲ್ಲ ಊರುಗಳಲ್ಲೂ ಹಾತೊರೆಯುತ್ತಾರೆ. ಸಿಕ್ಕಿದ್ರೆ ಚಾನ್ಸು. ಒಳ್ಳೆಯ ಸಂಬಳ, ದಿನಾ ಮಾಂಸದ ಊಟ ಬೇರೆಲ್ಲಿ ಸಿಗುತ್ತೆ? ಹೆತ್ತಮ್ಮ ಕೂಡ ಗಟ್ಟಿ ಮನಸ್ಸು ಮಾಡಿ ಒಪ್ಪಿಗೆ ಕೊಡುತ್ತಾಳೆ" ಅಂದ ಹಸನ್.

"ನೀನು ಈಚೆ ಬಂದ ಮೇಲೆ ನಿಮ್ಮವರು ಯಾರಾದ್ರೂ ಸೇರಿದ್ದಾರಾ?" ಈ ಬಾರಿ ನಾನು ಕೇಳಿದೆ.

"ನನ್ನ ಅಣ್ಣ ಮೊದಲೇ ಸೇರಿದ್ದಾನೆ ಎಂದೆನಲ್ಲ. ನಾನೂ ಸೇರ ಬಯಸಿದ್ದೆ, ನನಗೆ ಕೊಡಲಿಲ್ಲ, ನನ್ನ ತಮ್ಮ ಕೂಡ ಸಂದರ್ಶನಕ್ಕೆ ಹೋಗಿದ್ದ. ಆಯ್ಕೆಯಾಗಲಿಲ್ಲ. ಅಣ್ಣನಿಗೆ ಕೊಟ್ಟಿದ್ದರಲ್ಲ, ಹಾಗೆ ಒಂದೇ ಮನೆಯಿಂದ ಹಲವರಿಗೆ ಚಾನ್ಸು ಕೊಡುವುದಿಲ್ಲ ಎಂಬ ವದಂತಿ ಇದೆ ಎಂದೆನಲ್ಲ. ಆದರೂ ಕೆಲವು ಮನೆಯಲ್ಲಿ ಇಬ್ಬರು ಸೇನೆಗೆ ನೇಮಕವಾದದ್ದೂ ಇದೆ, ಅಲ್ಲಲ್ಲಿ ಕೆಲವು." ಎಂದ ಆತ.